ಸಿಲುಕಿಕೊಂಡಿದೆ. ಒಂದು ಕಾಲದಲ್ಲಿ ಬದುಕುವ ಛಲ ಮತ್ತು ಆತ್ಮಪ್ರತ್ಯಯದಿಂದ ಕೂಡಿದ್ದ ಗ್ರಾಮಸಮೂಹದವರು, ತಾವು ಶತಮಾನಗಳಿಂದ ಬದುಕಿಕೊಂಡು ಬಂದ ಮಣ್ಣಲ್ಲೇ ಹೂತು ಹೋಗುತ್ತಿದ್ದಾರೆ. ಅಂದಮೇಲೆ ಜನಪದರು ತಮ್ಮ ಬದುಕಿನೊಂದಿಗೆ ಕಟ್ಟಿಕೊಂಡು ಬಂದ ಕಲೆಗೆ ಅಸ್ತಿತ್ವ ಎಲ್ಲಿರುತ್ತದೆ. ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯದಂತೆ ಜಾನಪದವೆಂಬುದು ಅಳಿಯುವುದಿಲ್ಲ, ಅದು ಎಂದೆಂದಿಗೂ ಪಳೆಯುಳಿಕೆಯಂತೆ ಉಳಿದಿರುತ್ತದೆ ಎಂಬ ಮಾತು ಪ್ರಚಲಿತದಲ್ಲಿದೆ. ಆದರೆ ನನ್ನ ಪ್ರಕಾರ 'ಗ್ರಾಮೀಣ ಜನಪದ ಪ್ರಕಾರ'ವೆಂಬುದು ಕ್ರಮೇಣ ಅಳಿದುಹೋಗಬಹುದು.

**● ಎಂಟನೇ ತರಗತಿಯಲ್ಲಿ ಫೇಲಾಗಿ ಇನ್ನು ಓದು ಬೇಡ ಎಂದು ತೀರ್ಮಾನಿಸಿದ್ದ ಹನೂರಿನ ಬಾಲಕ ಈ ರೀತಿ ಬೆಳೆದುದು ಒಂದು ಅಚ್ಚರಿ. ನಿಮ್ಮ ಸುದೀರ್ಘ ಕಾಲುದಾರಿಯ ಯಾನದಲ್ಲಿ ಯಾರನ್ನು ನೆನಪಿಸಿಕೊಳ್ಳುವಿರಿ? ಯಾರ ಅಧ್ಯಯನ ನಿಮ್ಮನ್ನು ಪ್ರಭಾವಿಸಿದೆ?**

ನಾನು ಹಳಗನ್ನಡದಲ್ಲಿ ಆಸಕ್ತಿ ವಹಿಸಿದ್ದು ನನ್ನ ಪ್ರಾಥಮಿಕ ಶಾಲೆಯ ಅಧ್ಯಾಪಕರಿಂದಲೇ. ನನ್ನ ಬಾಲ್ಯ ಕಾಲದ ಮೇಷ್ಟ್ರು ಬಿಳಿಗಿರಿರಂಗ ಶೆಟ್ಟರು ಹಳಗನ್ನಡ ಕಾವ್ಯಗಳನ್ನು ಮನನೀಯವಾಗಿ ಪ್ರಸ್ತುತಪಡಿಸುತ್ತಿದ್ದರು. ಅವರ ಮಾತುಕತೆ, ಹಾಡುಗಾರಿಕೆಯ ದನಿ ನನ್ನ ಅಂತರಂಗದಿಂದ ಇನ್ನೂ ಹೋಗಿಯೇ ಇಲ್ಲ. ಕಾಲೇಜಿನಲ್ಲಿ ಅದೇ ಕುಮಾರವ್ಯಾಸನೇ ಮೊದಲಾಗಿ ಹಳಗನ್ನಡವನ್ನು ಅಂತರಂಗಕ್ಕೆ ತುಂಬಿದವರು ಪ್ರೊ. ಜಿ. ವೆಂಕಟಸುಬ್ಬಯ್ಯ. ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಶ್ರೀರಾಮಾಯಣ ದರ್ಶನಂ ಕಾವ್ಯವನ್ನು ಮೆಲುದನಿಯಲ್ಲಿ ಓದಿ ಅದನ್ನು ಆಪ್ಯಾಯಮಾನವಾಗಿಸಿದವರು ಪ್ರೊ. ಜಿ.ಎಸ್. ಶಿವರುದ್ರಪ್ಪನವರು. ಶಾಸನಗಳ ಅಧ್ಯಯನ ಕ್ರಮ, ಕರ್ನಾಟಕ ಇತಿಹಾಸ, ಸಂಸ್ಕೃತಿಯನ್ನು ಹೇಳಿಕೊಟ್ಟವರು ಡಾ. ಎಂ. ಚಿದಾನಂದಮೂರ್ತಿ. ನಾನು ಉದ್ಯೋಗ ನಿಮಿತ್ತ ಚಿತ್ರದುರ್ಗ ಸೇರಿದಮೇಲೆಯೇ ಜಾನಪದ ನನ್ನ ಅರಿವಿಗೆ ಬಂದದ್ದು. ಇದನ್ನು ಎಲ್ಲಿಯೂ ಸಾಂಪ್ರದಾಯಿಕವಾಗಿ ಅಧ್ಯಯನ ಮಾಡಿದವನಲ್ಲವಾದರೂ ಮದ್ರಾಸಿನಲ್ಲಿ ನಾಲ್ಕುವರ್ಷಗಳಿದ್ದು ಕನ್ನಡ ಜಾನಪದದ ಹಲವು ಹತ್ತು ಮುಖಗಳನ್ನು ಪರಿಚಯಿಸುವ ಇಂಗ್ಲಿಷ್ ಭಾಷಾ ವಿಶ್ವಕೋಶದ ಸಂಪಾದಕನಾಗಿ ಕೆಲಸ ಮಾಡಿದ್ದೇನೆ ಎಂದೆನಲ್ಲ. ನನಗೆ ಈಗ ಹಳಗನ್ನಡ ಪರಂಪರೆ, ಜಾನಪದ ಬೇರೆಬೇರೆ ಎಂದೇನೂ ಅನಿಸುವುದಿಲ್ಲ.

**● ಉಳಿದಂತೆ ಕಾರ್ನಾಡ್, ರಾಮಚಂದ್ರದೇವ ಮುಂತಾದವರ ಸಾಹಿತ್ಯವಲ್ಲದೆ ಕನ್ನಡ ಕಥಾಸಾಹಿತ್ಯವನ್ನೂ ನಿಮ್ಮ ಆಸಕ್ತಿಯ ಭಾಗವನ್ನಾಗಿಸಿಕೊಂಡಿರುವಿರಿ. ದೇವರಾಜ ಅರಸರ ಕುರಿತು ಗ್ರಂಥವೊಂದನ್ನು ಸಿದ್ಧ ಪಡಿಸಿರುವಿರಿ ಇವುಗಳ ಕುರಿತು...**

ನನಗೆ ನಾಟಕ ಮತ್ತು ಸಿನಿಮಾ ಕ್ಷೇತ್ರಗಳೂ ಇಷ್ಟ. 1973ರಿಂದ ಇಲ್ಲಿಯವರೆಗೆ ಕಂಬಾರ, ಕಾರ್ನಾಡ, ಲಂಕೇಶರ ನಾಟಕಗಳನ್ನು ನೋಡುತ್ತಲೇ ಬಂದಿದ್ದೇನೆ. ಅವರ ನಾಟಕಗಳನ್ನು ತುಂಬಾ ಆಸಕ್ತಿಯಿಂದ ಶಕ್ತಿಮೀರಿ ವಿದ್ಯಾರ್ಥಿಗಳಿಗೆ ಮನನವಾಗುವಂತೆ ಪಾಠ ಮಾಡಿದ್ದೇನೆ. ಆದರೆ ನಾಟಕಗಳನ್ನು ಬರೆಯುವ ಆಸಕ್ತಿ ಇಲ್ಲ. ಬಹುಪಾಲು ಜಗತ್ತಿನ ಎಲ್ಲ ಶ್ರೇಷ್ಠ ಚಲನಚಿತ್ರಗಳನ್ನು ನೋಡಿದ್ದೇನೆ. ದೇವರಾಜ ಅರಸರನ್ನು ಕುರಿತು 2000ನೇ ಇಸವಿಯಲ್ಲಿ ಪುಸ್ತಕ ಮಾಡಿದ್ದು ಗೆಳೆಯರಾದ ಎಚ್.ಎ. ವೆಂಕಟೇಶ್ ಮತ್ತು ಹಿ.ಶಿ. ರಾಮಚಂದ್ರೇಗೌಡರ ಸಹಕಾರ ಮತ್ತು ಪ್ರೇರಣೆಯಿಂದ.